# ಫೇಸ್‌ಬುಕ್ ವಿಡಿಯೊ: ಡೌನ್‌ಲೋಡ್ ಮಾಡಿ!



ಫೇಸ್‌ಬುಕ್‌ನಲ್ಲಿ ಸ್ಕ್ರಾಲ್ ಮಾಡುವಾಗ ಯಾವುದೋ ಅಪರೂಪದ ವಿಡಿಯೊ ಕಾಣುತ್ತದೆ. ಆದರೆ, ಅದನ್ನು ಡೌನ್‌ಲೋಡ್ ಮಾಡಲು ಆಗುವುದಿಲ್ಲ. ಆಗ ಬಳಕೆದಾರರು ನಿರಾಸೆಗೊಂಡು, 'ಛೇ ಈ ಫೇಸ್‌ಬುಕ್‌ನವರು ವಿಡಿಯೊ ಡೌನ್‌ಲೋಡ್‌ಗೆ ಅವಕಾಶ ಮಾಡಿಕೊಡಬಾರದಿತ್ತೇ' ಎಂದು ಒಳಗೊಳಗೆ ಗೊಣಗುತ್ತಾರೆ.

ಹೀಗೆ ಗೊಣಗುವುದನ್ನು ಬಿಟ್ಟುಬಿಡಿ. ಯಾಕೆಂದರೆ ಫೇಸ್‌ಬುಕ್‌ನಲ್ಲಿ ವಿಡಿಯೊವನ್ನು ಸುಲಭವಾಗಿ ಡೌನ್‌ಲೋಡ್ ಮಾಡುವ ವಿಧಾನ ಇಲ್ಲಿದೆ. ಫೇಸ್‌ಬುಕ್‌ನವರು ವಿಡಿಯೊ ಡೌನ್‌ಲೋಡ್ ಮಾಡಲು ಪ್ರತ್ಯೇಕ ಆಯ್ಕೆ ಕೊಡದಿದ್ದರೇನು, ಗೂಗಲ್ ಕ್ರೋಮ್ ಬ್ರೌಸರ್‌ನಲ್ಲಿ ಒಂದು ಸಣ್ಣ ಸೆಟ್ಟಿಂಗ್ಸ್ ಫೇಸ್‌ಬುಕ್‌ನ ವಿಡಿಯೊ ಡೌನ್‌ಲೋಡ್‌ಗೆ ಸಹಕರಿಸುತ್ತದೆ.

ಕಂಪ್ಯೂಟರ್‌ನಲ್ಲಿ ಮೊದಲು ಗೂಗಲ್ ಕ್ರೋಮ್ ತೆರೆಯಬೇಕು. ಗೂಗಲ್ ಸರ್ಚ್‌ನಲ್ಲಿ 'ಫೇಸ್‌ಬುಕ್ ವಿಡಿಯೊ ಡೌನ್‌ಲೋಡರ್ ಎಕ್ಸ್‌ಟೆನ್ಷನ್' (Facebook Video downloader extension) ಎಂದು ಸರ್ಚ್ ಮಾಡಿ. ವಿಡಿಯೊ ಡೌನ್‌ಲೋಡರ್ ಫಾರ್ ಫೇಸ್‌ಬುಕ್ (Video Downloader for FaceBook–google chrome) ಎಂಬುದು ಕಾಣಿಸಿಕೊಳ್ಳುತ್ತದೆ. ಅದನ್ನು ಕ್ಲಿಕ್ಕಿಸಿದರೆ ಕ್ರೋಮ್ ವೆಬ್ ಸ್ಟೋರ್ (chrome web store) ವೆಬ್‌ಸೈಟ್ ತೆರೆದುಕೊಳ್ಳುತ್ತದೆ. ಅದರಲ್ಲಿ ಕಾಣುವ 'ಆ್ಯಡ್ ಟು ಕ್ರೋಮ್' ಮೇಲೆ ಕ್ಲಿಕ್ಕಿಸಿದರೆ ತೆರೆದುಕೊಳ್ಳುವ ಡೈಲಾಗ್ ಬಾಕ್ಸ್‌ನಲ್ಲಿ ಆ್ಯಡ್ ಎಕ್ಸ್‌ಟೆನ್ಷನ್ ಆಯ್ಕೆಯನ್ನು ಒತ್ತಿ. ಕೂಡಲೇ ಸೆಟ್ಟಿಂಗ್ಸ್ ಬದಲಾದ ಬಗ್ಗೆ ಸಂದೇಶ ಬರುತ್ತದೆ. ಬೇಡವಾದರೆ ಅದೇ ಜಾಗದಲ್ಲಿ 'ರಿಮ್ಯೂವ್ ಫ್ರಮ್ ಕ್ರೋಮ್' ಆಯ್ಕೆ ಕ್ಲಿಕ್ಕಿಸಿ.

ಬಳಿಕ ಫೇಸ್‌ಬುಕ್ ತೆರೆಯಿರಿ. ಈಗ ನೀವು ಡೌನ್‌ಲೋಡ್ ಮಾಡಬೇಕೆಂದಿರುವ ವಿಡಿಯೋ ಸೆಲೆಕ್ಟ್ ಮಾಡಿ. ನಂತರ ಫೇಸ್‌ಬುಕ್ ವೆಬ್‌ಸೈಟ್‌ನ ಬಲತುದಿಯಲ್ಲಿ ಕಾಣುವ 'ವಿಡಿಯೊ ಡೌನ್‌ಲೋಡರ್ ಫಾರ್ ಫೇಸ್‌ಬುಕ್' ಚಿಹ್ನೆಯ (ಕ್ರೋಮ್‌ನ ಎಕ್ಸ್‌ಟೆನ್ಷನ್) ಮೇಲೆ ಕ್ಲಿಕ್ಕಿಸಿದರೆ ಕ್ರೋಮ್‌ನ ಎಕ್ಸ್‌ಟೆನ್ಷನ್ ಕ್ಲಿಕ್ ಮಾಡಿ. ಅಲ್ಲಿ ಬೇಕಾದ ವಿಡಿಯೋ ಕ್ವಾಲಿಟಿ ಸೆಲೆಕ್ಟ್ ಮಾಡಿ. ನಂತರ ಡೌನ್‌ಲೋಡ್ ವಿಡಿಯೊ ಒತ್ತಿದರೆ ವಿಡಿಯೊ ಡೌನ್‌ಲೋಡ್ ಆಗುತ್ತದೆ.

ಗೂಗಲ್ ಕ್ರೋಮ್‌ನಂತೆಯೇ ಮೋಜಿಲ್ಲಾ ಫೈರ್‌ಫಾಕ್ಸ್ ಬ್ರೌಸರ್‌ನಲ್ಲೂ ಸೆಟ್ಟಿಂಗ್ಸ್ ಬದಲಾವಣೆ ಮಾಡಿಕೊಂಡು ಫೇಸ್‌ಬುಕ್‌ನಲ್ಲಿ ವಿಡಿಯೊ ಡೌನ್‌ಲೋಡ್ ಮಾಡಬಹುದು.

ಫೈರ್‌ಫಾಕ್ಸ್ ಬ್ರೌಸರ್ ತೆರೆದು ಅದರಲ್ಲಿ 'ಆ್ಯಡ್ ಆನ್' ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಬಳಿಕ ಫೇಸ್‌ಬುಕ್‌ನಿಂದ ಡೌನ್‌ಲೋಡ್ ಮಾಡಬೇಕಾದ ವಿಡಿಯೊದ ಲಿಂಕ್ ಅನ್ನು ಕಾಪಿ ಮಾಡಿಕೊಂಡು ಅದನ್ನು 'ಆ್ಯಡ್ ಆನ್'ನಲ್ಲಿ ಪೇಸ್ಟ್ ಮಾಡಿ ವಿಡಿಯೊ ಡೌನ್‌ಲೋಡ್ ಮಾಡಿಕೊಳ್ಳಬಹುದು. ■

# ಮುಖಚಹರೆ ರಿಯಾಯಿತಿ!



ಬಳಕೆದಾರರ ಮುಖಚಹರೆಯನ್ನು ಗುರುತಿಸುವ ತಂತ್ರಜ್ಞಾನದ ಬಗೆಗಿನ ಪರವಿರೋಧ ನಡುವೆಯೇ ಬೆಂಗಳೂರಿನ ಟೀ ಸೆಂಟರ್‌ವೊಂದಕ್ಕೆ ಫೇಸ್ ರಿಕಗ್ನೈಸೇಷನ್ ತಂತ್ರಜ್ಞಾನ ಕಾಲಿಟ್ಟಿದೆ. ಇಂದಿರಾನಗರದಲ್ಲಿನ 'ಚಯ್ಯಾಸ್' ಟೀ ಸೆಂಟರ್‌ನಲ್ಲಿ ಮೊದಲ ಬಾರಿಗೆ ಮುಖಚಹರೆ ಗುರುತು ಹಿಡಿಯುವ ತಂತ್ರಜ್ಞಾನ ಅಳವಡಿಸಲಾಗಿದೆ. ಈ ಸೆಂಟರ್‌ಗೆ ಹೋಗಿ ಟೀ ಖರೀದಿಸುವ ಗ್ರಾಹಕರ ಮುಖಚಹರೆ ಫೋಟೊವನ್ನು ಈ ತಂತ್ರಜ್ಞಾನ ತೆಗೆದುಕೊಳ್ಳುತ್ತದೆ. ಗ್ರಾಹಕರಿಗೆ ರಿಯಾಯಿತಿ ಒದಗಿಸುವ ಸಲುವಾಗಿ ಈ ವ್ಯವಸ್ಥೆ ಅಳವಡಿಸಿಕೊಳ್ಳಲಾಗಿದೆ ಎಂಬುದು ಚಯ್ಯಾಸ್‌ನ ವಾದವಾದರೆ, ಇದರಿಂದ ನಮ್ಮ ಖಾಸಗೀತನಕ್ಕೆ ಧಕ್ಕೆಯಾಗುತ್ತದೆ ಎಂಬುದು ಗ್ರಾಹಕರ ವಾದವಾಗಿದೆ. ಇದು ಚರ್ಚೆಗೆ ಗ್ರಾಸವಾಗಿದೆ.

'ನಮ್ಮ ಟೀ ಸೆಂಟರ್‌ಗೆ ನಾಲ್ಕು ಮತ್ತು ಐದನೇ ಬಾರಿಗೆ ಬರುವವರಿಗೆ ರಿಯಾಯಿತಿ ನೀಡುವ ಸಲುವಾಗಿ ಮುಖಚಹರೆ ದಾಖಲಿಸುವ ಸಾಫ್ಟ್‌ವೇರ್ ಅಳವಡಿಸಲಾಗಿದೆ. ಅದರ ಮೂಲಕ ಯಾರು ಎಷ್ಟನೇ ಬಾರಿಗೆ ಇಲ್ಲಿಗೆ ಬಂದಿದ್ದಾರೆ ಎನ್ನುವುದನ್ನು ಪತ್ತೆಹಚ್ಚಿ, ರಿಯಾಯಿತಿ ನೀಡಲಾಗುತ್ತದೆ. ಆ ವಿವರವನ್ನು ಮೊಬೈಲ್‌ಗೆ ರವಾನಿಸಲಾತ್ತದೆ' ಎಂಬುದು ಸಿಬ್ಬಂದಿ ಮಾತು.

ಇದು ಗ್ರಾಹಕ ಸ್ನೇಹಿ ಸಾಫ್ಟ್‌ವೇರ್. ಇದರಲ್ಲಿನ ದತ್ತಾಂಶವನ್ನು ಚಯ್ಯಾಸ್ ಸಿಬ್ಬಂದಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಲಭ್ಯವಾಗುವುದಿಲ್ಲ. ಟೀ ಸೆಂಟರ್‌ನಲ್ಲಿರುವ ರಿಯಾಯಿತಿ ಯೋಜನೆಯ ಲಾಭಕ್ಕಾಗಿ ಮಾತ್ರ ಉಪಯೋಗಿಸಲಾಗುತ್ತದೆ ಎನ್ನುತ್ತಾರೆ ಸಿಬ್ಬಂದಿ. ಇದೇ ತಂತ್ರಜ್ಞಾನ ವಿದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದೆ.

■ **ಶಶಿಕುಮಾರ್ ಸಿ.**